(3) ಆಶ್ರಯ ಯೋಜನೆಯಲ್ಲಿ ಸರ್ವೆ ನಂ. 24 ನಿಂಬೇಮಠದ ಹಳ್ಳಿಯ 4 ಎಕರೆ ಜಮೀನಿನಲ್ಲಿ ಸೈಟುಗಳನ್ನಾಗಿ ಮಾಡುವುದು.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೇ, ಶಿರಾತಾಲ್ಲೂಕಿನ ವಡ್ಡನ ಹಳ್ಳಿ, ನಿಂಬೇ ಮಠದ ಹಳ್ಳಿ ಮತ್ತು ಅಕ್ಕಪಕ್ಕದ ಗ್ರಾಮದಲ್ಲಿರುವ ನಿವೇಶನರಹಿತ ರೈತರು ಅದೇ ಗ್ರಾಮದ ಮಧ್ಯದಲ್ಲಿ ಬರುವ ಸರ್ವೆ ನಂಬರ್. 24 ನಿಂಬೇ ಮಠದಹಳ್ಳಿ 4 ಎಕರೆ ಸರ್ಕಾರಿ ಜಮೀನಿನಲ್ಲಿ ಸೈಟುಗಳನ್ನಾಗಿ ವಿಂಗಡಿಸಲು ಆಶ್ರಯ ಸಮಿತಿ ತೀರ್ಮಾನಿಸಿದ್ದು, ಇದುವರೆವಿಗೂ ಸೈಟುಗಳನ್ನು ವಿಂಗಡಿಸಲು ಸಾಧ್ಯವಾಗಿಲ್ಲ. ಸ್ಥಳೀಯ ಮುಖಂಡರು ಸೈಟುಗಳನ್ನು ವಿಂಗಡಿಸಲು ತೊಂದೆರ ಉಂಟು ಮಾಡಿದ್ದು, ನಿವೇಶನರಹಿತರಿಗೆ ತೊಂದರೆಯಾಗಿ ಎಷ್ಟೋ ಜನರು ಖಾಸಗಿಯವರ ಜಮೀನಿನಲ್ಲಿ ವಾಸವಾಗಿದ್ದವರನ್ನು ಹೊರದೂಡಲಾಗಿದೆ. ಆದುದರಿಂದ, ಸನ್ಮಾನ್ಯ ಮಂತ್ರಿಗಳು ಜಿಲ್ಲಾಧಿಕಾರಿಗಳು ಈ ಕೂಡಲೇ ಸ್ಥಳಕ್ಕೆ ಕಳುಹಿಸಿ ಈ ಸ್ಥಳದಲ್ಲಿ ಸೈಟುಗಳನ್ನು ವಿಂಗಡಿಸಿ ಸಮಿತಿಯವರು ಹಂಚಲು ಅವಕಾಶ ಮಾಡುವಿರೆಂದು ನಿಮ್ಮಲ್ಲಿ ಅರಿಕೆ ಮಾಡಲಿಚ್ಚಿಸುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಚಾರವನ್ನು ಗಮನಿಸಿದೆ. ಉತ್ತರವನ್ನು ನಂತರ ಒದಗಿಸಿಕೊಡುತ್ತೇನೆ.

(4) 5 ಹೆಚ್.ಪಿ. ಹಾಗೂ 10 ಹೆಚ್.ಪಿ. ಎಲೆಕ್ಟ್ರಿಕಲ್ ಪಂಪ್‌ಸೆಟ್ಟಿಗೆ ಸರ್ಕಾರದಿಂದ ವಾರ್ಷಿಕ ಬಾಡಿಗೆ ವಿನಾಯಿತಿ.

ಶ್ರೀ ಎಂ.ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೇ, 5 ಹೆಚ್.ಪಿ. ಹಾಗೂ 10 ಹೆಚ್.ಪಿ. ಇಲೆಕ್ಟ್ರಿಕ್ ಪಂಪು ಸೆಟ್ಟಿಗೆ ಸರ್ಕಾರದಿಂದ ವಾರ್ಷಿಕ ಬಾಡಿಗೆ ವಿನಾಯಿತಿ ಮಾಡಿದ್ದು ಈಗ ಪ್ರತಿ ಯೂನಿಟ್‌ಗೆ 40 ಪೈಸೆಯಂತೆ ಆಕಾರ ಮಾಡುವುದನ್ನು ಸರ್ಕಾರ ತೀರ್ಮಾನಿಸಿದೆ ಎಂದು ತಿಳಿದು ಬಂದಿದೆ. 5 ಹೆಚ್.ಪಿ. ಹಾಗೂ 10 ಹೆಚ್.ಪಿಗಳಿಗೆ ವಿದ್ಯುತ್ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ ಡಿಪಾಸಿಟ್ ಹಣ ಎಷ್ಟು ಇರಬೇಕು ಮತ್ತು ಪ್ರತಿಯೊಂದು ಪೋಲುಗಳಿಗೆ ಎಷ್ಟು ಹಣ ಹೆಚ್ಚಿಗೆ ತುಂಬಬೇಕಾಗುತ್ತದೆ ? 5 ಹೆಚ್.ಪಿ. ಮತ್ತು 10 ಹೆಚ್.ಪಿ. ಮೋಟರ್ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ ಹುಕ್ಕೇರಿ ತಾಲ್ಲೂಕು ರೂರಲ್ ಇಲೆಕ್ಟ್ರಿಕ್ ಸೊಸ್ಸೆಟಿಯವರು ಎಷ್ಟು ಹಣ ಡಿಪಾಸಿಟ್ ಎಂದು ತೆಗೆದುಕೊಳ್ಳುತ್ತಾರೆ ? ಪೇರು ಹಣ ಎಷ್ಟು ಕೊಡಲು ಹಣಕಾಸಿನ ವ್ಯತ್ಯಾಸ ಎಷ್ಟು ಈ ವಿಷಯವನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ವಿದ್ಯುತ್ ಮಂತ್ರಿಗಳಿಂದ ಸದನದಲ್ಲಿ ದಿನಾಂಕ: 23–2–93 ರಂದು ಉತ್ತರವನ್ನು ಬಯಸಿದ್ದೆನು.

ಶ್ರೀ ಕೆ.ಎ. ನಿಸಾರ್ ಅಹಮದ್:– ಮಾನ್ಯ ಸದಸ್ಯರಿಗೆ ಉತ್ತರವನ್ನು ನಾಳೆಯ ದಿನ ಒದಗಿಸಿಕೊಡುತ್ತೇನೆ.

ರಾಜ್ಯಪಾಲರು ಸಲ್ಲಿಸತಕ್ಕ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಮುಂದುವರಿದ ಚರ್ಚೆ.

ಅಧ್ಯಕ್ಷರು:– ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಮೇಲಿನ ಚರ್ಚೆ. ಶ್ರೀ ಯಡಿಯೂರಪ್ಪನವರು.

† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):– ಸನ್ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾವುಗಳು ರಾಜ್ಯಪಾಲರು ದಯಪಾಲಿಸಿದ ಭಾಷಣದ ಮೇಲೆ ಅಭಿನಂದನೆಯನ್ನು ಸಲ್ಲಿಸಿ